ಚಿತ್ರ: ಕಿಶೋರ್ ಕುಮಾರ್ ಬೋಳಾರ್



ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಸಂಸ್ಥೆಯ ಸಮಾರಂಭವೊಂದರಲ್ಲಿ..

ತಲೆ ಮೇಲಿಂದ ಚೆಂಡನ್ನು ಬೌಂಡರಿಗೆರೆಗೆ ಹೊಡೆಯುತ್ತಿದ್ದ ವೀರೇಂದ್ರ ಸೆಹ್ವಾಗ್, ಮಣಿಕಟ್ಟಿನ ಚಲನೆಯ ಮೂಲಕ ಆಕರ್ಷಕ ಫ್ಲಿಕ್ ಮಾಡುತ್ತಿದ್ದ ಮೊಹಮ್ಮದ್ ಅಜರುದ್ದೀನ್. ಸ್ವಿಚ್ ಹಿಟ್ ಮೂಲಕ ಬೌಲರ್‌ಗಳ ನೆಮ್ಮದಿ ಕೆಡಿಸಿದ್ದ ಇಂಗ್ಲೆಂಡ್‌ನ ಕೆವಿನ್ ಪೀಟರ್ಸನ್, ರಿವರ್ಸ್ ಸ್ವೀಪ್ ಪರಿಣತ ಏಯಾನ್ ಮಾರ್ಗನ್ ಅವರ ಸಾಲಿನಲ್ಲಿ ಮಹಿ ಇದ್ದಾರೆ. ಏಕದಿನ, ಟ್ವೆಂಟಿ–20 ಮತ್ತು ಐಪಿಎಲ್ ಟೂರ್ನಿಗಳ ಪಂದ್ಯಗಳ ಕೊನೆಯ ಓವರ್‌ಗಳಲ್ಲಿ ದೋನಿ ಬ್ಯಾಟಿಂಗ್ ಮಾಡುತ್ತಿದ್ದರೆ ಬೌಲರ್‌ಗಳು ಯಾರ್ಕರ್ ಪ್ರಯೋಗಿಸಿದರೆ ಅದಕ್ಕೆ ದೋನಿ ಬಳಿ ಉತ್ತರ ಸಿದ್ಧವಾಗಿರುವುದನ್ನು ಹಲವು ಬಾರಿ ನೋಡಿದ್ದೇವೆ. ಆದ್ದರಿಂದಲೇ ಅವರು ವಿಶ್ವದ ಅತ್ಯುತ್ತಮ ಫಿನಿಷರ್ ಎಂಬ ಖ್ಯಾತಿ ಗಳಿಸಿರುವುದು. ಅವರ ವಿಶಿಷ್ಟ ಶೈಲಿಯ ಬ್ಯಾಟಿಂಗ್ ಮೂಲಕ ಭಾರತ ತಂಡಕ್ಕೆ ಹಲವಾರು ಗೆಲುವುಗಳನ್ನು ತಂದಿತ್ತಿದ್ದಾರೆ. ಅದರಲ್ಲಿ ಕೆಲವು ಶ್ರೇಷ್ಠ ಇನಿಂಗ್ಸ್‌ಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

### ವಾಂಖೆಡೆಯ ಆ ಸಂಜೆ

2011ರ ಏಪ್ರಿಲ್ 2ರಂದು ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದಿದ್ದ ಐಸಿಸಿ ಏಕದಿನ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ದೋನಿಯ ಬ್ಯಾಟಿಂಗ್ ಅವಿಸ್ಮರಣೀಯವಾದದ್ದು. ಸ್ವತಃ ಅವರೇ ಈ ಮಾತು ಹೇಳಿದ್ದಾರೆ. ಆ ಪಂದ್ಯದಲ್ಲಿ ಶ್ರೀಲಂಕಾ ನೀಡಿದ್ದ 276 ರನ್‌ಗಳು ಗುರಿ ಬೆನ್ನತ್ತಿದ್ದ ಭಾರತ 114 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಸಂಕಷ್ಟ ಅನುಭವಿಸಿತ್ತು . ಆರಂಭಿಕ ಬ್ಯಾಟ್ಸ್‌ಮನ್ ಗೌತಮ್ ಗಂಭೀರ್ ಹೋರಾಟ ಮುಂದುವರಿಸಿದ್ದರು. ಅಂದು ದೋನಿ ಐದನೇ ಕ್ರಮಾಂಕದಲ್ಲಿ ದೋನಿ ಕ್ರೀಸ್‌ಗೆ ಬರುವ ಮುನ್ನ ಸೆಹ್ವಾಗ್, ಸಚಿನ್, ಕೊಹ್ಲಿ ಪೆವಿಲಿಯನ್ ಸೇರಿಯಾಗಿತ್ತು. ಯುವರಾಜ್ ಸಿಂಗ್ ಬರಬೇಕಿದ್ದ ಕ್ರಮಾಂಕದಲ್ಲಿ ಅವರು

## ಚುರುಕಿನ ಓಟ

ವಿಕೆಟ್‌ನಲ್ಲಿ ಒಂದು ಮತ್ತು ಎರಡು ರನ್ ಪಡೆಯುವ ಚುರುಕುತನದಲ್ಲಿ ದೋನಿಗೆ ಅವರೇ ಸಾಟಿ. 22 ಯಾರ್ಡ್ ಪಿಚ್‌ನಲ್ಲಿ ಚಿರತೆಯಂತೆ ಓಡುವ ದೋನಿಯೊಂದಿಗೆ ಇನ್ನೊಂದು ತುದಿಯಲ್ಲಿ ಬ್ಯಾಟಿಂಗ್ ಮಾಡುವ ಆಟಗಾರ ಸ್ಪರ್ಧೆ ನಡೆಸಬೇಕಾಗುತ್ತದೆ. ಇಲ್ಲದಿದ್ದರೆ ರನ್‌ಔಟ್ ಆಗುವುದು ಖಚಿತ. ಶಾರ್ಟ್ ಲೆಗ್, ಮಿಡ್ ಆನ್, ಮಿಡ್ ಆಫ್, ಕವರ್ಸ್‌ಗಳತ್ತ ಚೆಂಡನ್ನು ತಳ್ಳಿ ಒಂದು ಮತ್ತು ಎರಡು ರನ್ ಪಡೆಯುವ ಕಲೆ ಅವರಿಗೆ ಕರಗತ. ಅವರಷ್ಟೇ ಚುರುಕಿನಿಂದ ಓಡಬಲ್ಲ ಸಾಮರ್ಥ್ಯವನ್ನು ವಿರಾಟ್ ಕೊಹ್ಲಿ ಮತ್ತು ಅಜಿಂಕ್ಯ ರಹಾನೆ ವೃದ್ಧಿಸಿಕೊಂಡಿದ್ದಾರೆ. ಇದರಿಂದ ಎದುರಾಳಿ ತಂಡದ ಫೀಲ್ಡರ್‌ಗಳ ಮೇಲೆ ಹೆಚ್ಚು ಒತ್ತಡ ಬೀಳುತ್ತಿರುವುದು ಖಚಿತ.



